**ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಹೊಳಲ್ಕೆರೆ**
**ಸಿ. ಸಿ. ನಂ: 1184/2020**

ಸಾಕ್ಷಿದಾರರ ಹೆಸರು : ಶೋಭಾ ಪಿಡಬ್ಲ್ಯು:01
ತಂದೆ / ಗಂಡನ ಹೆಸರು : ಬಸವರಾಜ್ ಸಿಡಬ್ಲ್ಯು:01
ವಯಸ್ಸು : 30 ವರ್ಷ
ಉದ್ಯೋಗ : ಮನೆಕೆಲಸ
ವಾಸಸ್ಥಳ : ತಾಳಿಕಟ್ಟೆ ಗ್ರಾಮ ಪ್ರ.ವ.ಬೋ ದಿ. :29.01.2024

ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ನ್ಯಾಯಾಲಯದ ಮುಂದೆ ಇರುವ 1 ಮತ್ತು 4 ನೇ ಆರೋಪಿತರು ಗೊತ್ತು. 1 ನೇ ಆರೋಪಿಯು ನನ್ನ ಗಂಡ. 4 ನೇ ಆರೋಪಿಯು ನನ್ನ ಗಂಡನ 2 ನೇ ಹೆಂಡತಿ. ಈ ದಿನ 2 ಮತ್ತು 3 ನೇ ಆರೋಪಿತರ ಪರ ವಕೀಲರು ಗೈರು ಹಾಜರಾತಿ ವಿನಾಯಿತಿ ಅರ್ಜಿ ಸಲ್ಲಿಸಿದ ಮೇರೆಗೆ 2 ಮತ್ತು 3 ನೇ ಆರೋಪಿತರನ್ನು ಗುರುತಿಸಲಾಯಿತು ಎಂದು ತೆಗೆದುಕೊಳ್ಳಲಾಯಿತು (ಈ ಬಗ್ಗೆ 2 ಮತ್ತು 3 ನೇ ಆರೋಪಿತರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ). ಸಾಕ್ಷಿಯು 2 ಮತ್ತು 3 ನೇ ಆರೋಪಿತರು ತನ್ನ ಅತ್ತೆ ಮತ್ತು ಮಾವ ಎಂದು ನುಡಿಯುತ್ತಾರೆ.

ಚಾ.ಸಾಃ 2 ರಿಂದ 12, 17 ಗೊತ್ತು. ಚಾ.ಸಾಃ 13 ರಿಂದ 16 ಗೊತ್ತಿಲ್ಲ.

ನಮ್ಮ ಊರು ತಾಳಿಕಟ್ಟೆ ಗ್ರಾಮ. ದಿಃ 18.09.2012 ರಂದು ಹೊಳಲ್ಕೆರೆ ಟೌನ್ ನ ಗಣಪತಿ ದೇವಸ್ಥಾನದಲ್ಲಿ ನನ್ನನ್ನು 1 ನೇ ಆರೋಪಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಮದುವೆ ಆದ ನಂತರ ನನ್ನ ಅಣ್ಣ ನನ್ನ ಗಂಡನಿಗೆ ಒಂದೂವರೆ ಲಕ್ಷ ರೂಪಾಯಿ ನಗದು ಹಣ ಮತ್ತು 3 ತೊಲೆ ಬಂಗಾರವನ್ನು ವರದಕ್ಷಿಣೆಯಾಗಿ ನೀಡಿರುತ್ತಾರೆ. ವರದಕ್ಷಿಣೆ ನೀಡಿದ್ದರೂ ಸಹ ಮದುವೆಯಾದ ನಂತರ ನನ್ನ ಗಂಡನ ಮನೆಯವರು ನನಗೆ ಬೈಯುವುದು, ಹೊಡೆಯುವುದು ಮಾಡುತ್ತಿದ್ದರು. ಆಗ ಅಕ್ಕ ಪಕ್ಕದ ಮನೆಯವರು ಬಂದು ನನಗೆ ಸಮಾಧಾನ ಮಾಡಿ ಅನುಸರಿಸಿಕೊಂಡು ಹೋಗುವಂತೆ ಹೇಳುತ್ತಿದ್ದರು. ಹೀಗಿರುವಾಗ ದಿಃ 20.09.2016 ರಂದು 1 ನೇ ಆರೋಪಿಯು ನಮ್ಮ ಗ್ರಾಮದ 4 ನೇ ಆರೋಪಿತಳನ್ನು ವಿವಾಹ ಮಾಡಿಕೊಂಡಿರುತ್ತಾರೆ. ದಿಃ 02.10.2016 ರಂದು ಆರೋಪಿತರೆಲ್ಲರೂ ನನಗೆ

ಹೆಚ್ಚಿನ ವರದಕ್ಷಿಣೆ ಹಣವನ್ನು ತರುವಂತೆ ಒತ್ತಾಯ ಮಾಡಿ ಬಾಯಿಗೆ ಬಂದಂತೆ ಬೈದು, ನನ್ನನ್ನು ಸಾಯಿಸುವುದಾಗಿ ನನಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಸ್ವಲ್ಪ ದಿನಗಳ ನಂತರ ರವೀಶ್, ನಾಗರಾಜ್, ಕೆಂಚಪ್ಪ ಮತ್ತು ಗಂಗಾಧರರವರು ನನ್ನ ಗಂಡನಿಗೆ 2 ನೇ ಮದುವೆಯಾಗಲು ಕುಮ್ಮಕ್ಕು ನೀಡಿರುತ್ತಾರೆ. ದಿಃ 16.10.2016 ರಂದು ಈ ಬಗ್ಗೆ ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ದೂರನ್ನು ತೋರಿಸಲಾಗಿದ್ದು, ಸಾಕ್ಷಿಯು ದೂರನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿಃ1 ಎಂದು ಮತ್ತು ದೂರಿನಲ್ಲಿರುವ ಅವರ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು.

ದಿಃ 17.10.2016 ರಂದು ಪೋಲೀಸರು ನಮ್ಮ ಮನೆಗೆ ಬಂದು ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ಕ್ರಮವನ್ನು ಚಾ.ಸಾಃ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರ್ ಮಾಡಲು ಪೋಲೀಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸದರಿ ಸ್ಥಳ ಪಂಚನಾಮೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ನಿಪಿಃ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ 2 (ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಾನು ಪೋಲೀಸರಿಗೆ ನಮ್ಮ ಮದುವೆಯ ಪೋಟೋಗಳನ್ನು ಮತ್ತು ಮದುವೆಗೆ ಸಂಬಂಧಿಸಿದ ಗಣಪತಿ ದೇವಸ್ಥಾನದ ರಸೀದಿಯನ್ನು ನೀಡಿರುತ್ತೇನೆ. ಸಾಕ್ಷಿಗೆ ಸದರಿ 3 ಪೋಟೋಗಳನ್ನು ಮತ್ತು ರಸೀದಿಯನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಅನುಕ್ರಮವಾಗಿ ನಿಪಿಃ 3 ರಿಂದ 6 ಎಂದು ಗುರುತಿಸಲಾಯಿತು. ಈ ಸಂಬಂಧ ನಾನು 15 ದಿನಗಳ ನಂತರ ಪೋಲೀಸರ ಮುಂದೆ ನನ್ನನ್ನು ಕುತ್ತಿಗೆ ಹಿಚುಕಿ ಸಾಯಿಸಲು ಬಂದಿರುವುದಿಲ್ಲವೆಂದು ಮರುಹೇಳಿಕೆ ನೀಡಿದ್ದು, ರವೀಶ್, ನಾಗರಾಜ್, ಕೆಂಚಪ್ಪ ಮತ್ತು ಗಂಗಾಧರರವರು ನನ್ನ ಗಂಡನಿಗೆ ಪ್ರಚೋದನೆ ನೀಡಿಲ್ಲವೆಂದು ನಾನು ಮರುಹೇಳಿಕೆಯನ್ನು ನೀಡಿರುವುದಿಲ್ಲ. ಮಹಜರ್ ಮಾಡಲು ಪೋಲೀಸರು ನಮ್ಮ ಮನೆಗೆ ಬಂದಾಗ ಅಕ್ಕ ಪಕ್ಕ ಮನೆಯವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ಪೋಲೀಸರು ಪಂಚನಾಮೆ ಕಾಲಕ್ಕೆ ನಾನು ತೋರಿಸಿದ ನಮ್ಮ

ನಡುಮನೆಯ ಪೋಟೋವನ್ನು ಮತ್ತು ನಾನು ನಮ್ಮ ಮದುವೆಯ ಪೋಟೋ ಮತ್ತು ರಸೀದಿಗಳನ್ನು ಪೋಲೀಸರಿಗೆ ನೀಡಿದುದರ ಬಗ್ಗೆ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಸದರಿ 2 ಪೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಅನುಕ್ರಮವಾಗಿ ನಿಪಿಃ 7 ಮತ್ತು 8 ಎಂದು ಗುರುತಿಸಲಾಯಿತು. ನನ್ನ ಜೊತೆ ಗಲಾಟೆ ಮಾಡಿ ಹೊಡೆದಾಡಿದ ಜಾಗವನ್ನು ನಾನು ಪೋಲೀಸರಿಗೆ ತೋರಿಸಿದ್ದು, ಅದರಂತೆ ಅವರು ಪಂಚನಾಮೆ ಕಾಲಕ್ಕೆ ಅದರ ಸ್ಕೆಚ್ಚನ್ನು ತಾಯಾರಿಸಿರುತ್ತಾರೆ. ಸಾಕ್ಷಿಗೆ ಕಚ್ಚಾನಕಾಶೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಕಚ್ಚಾನಕಾಶೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಕಚ್ಚಾನಕಾಶೆಯನ್ನು ನಿಪಿಃ 9 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 9 (ಎ) ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು)

<u>ಪಾಟೀಸವಾಲು : ಮಾನ್ಯ ಎಪಿಪಿಯವರಿಂದ</u>

ದಿನಾಂಕಃ 02.10.2016 ರಂದು ಆರೋಪಿತರೆಲ್ಲರೂ ನಮ್ಮ ತಂದೆಯ ಮನೆಯ ಹತ್ತಿರ ಬಂದು ನನಗೆ ವರದಕ್ಷಿಣೆ ಹಣವನ್ನು ತರುವಂತೆ ಗಲಾಟೆ ಮಾಡಿ ರಾತ್ರಿ 10.30 ರ ಸಮಯದಲ್ಲಿ ನನ್ನ ಗಂಡ ನನ್ನ ಕುತ್ತಿಗೆ ಹಿಚುಕಿ ಸಾಯಿಸಲು ಬಂದಿರುತ್ತಾರೆಂದು ನಿಪಿಃ 1 ರಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ದಿಃ 24.10.2016 ರಂದು ನಾನು ಪೋಲೀಸರ ಮುಂದೆ ನಾನು ಈ ಮೇಲ್ಕಂಡ ವಿಳಾಸದಲ್ಲಿ ------------------------------------------------------------------------ ------------------------------------------------- ದೂರು ನೀಡಿದ್ದೇನೆ ಹಾಗೂ ನನ್ನ ಗಂಡ ರೋಜಾಳನ್ನು------------------------ ------------------------------------------------------------------------ ------------------------------------------------------------------------ ಪ್ರಚೋದನೆ ನೀಡಿರುವುದಿಲ್ಲವೆಂದು ಈ ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆಂದು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಮರುಹೇಳಿಕೆಯ ಮೇಲಿನ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ತನ್ನ ಮರುಹೇಳಿಕೆಯ ಭಾಗವನ್ನು ಅಲ್ಲಗಳೆದಿರುತ್ತಾರೆ, ಸಾಕ್ಷಿಯ ಅಲ್ಲಗಳೆದ ಮರುಹೇಳಿಕೆಯ ಭಾಗಗಳನ್ನು ಒಟ್ಟಾಗಿ

ನಿಪಿಃ 10 ಎಂದು ಗುರುತಿಲಾಯಿತು.

ಈ ಹಂತದಲ್ಲಿ ಮಾನ್ಯ ಎಪಿಪಿರವರು ಪ್ರಚೋದನೆ ನೀಡಿದ ಆರೋಪಿತರನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಲು ಅವಶ್ಯಕ ಅರ್ಜಿಯನ್ನು ದಾಖಲಿಸಲು ಮತ್ತು ಪಿರ್ಯಾದಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ